**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ
ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು -560 001.

**ಸಂಖ್ಯೆ:ಆರ್.ಎಂ.ಎಸ್.ಎ./ಆವಿ/ಸಿ.ಎ.ಸಿ/2016-17ರ/ದಾಖಲಾತಿ/2015-16** **ದಿನಾಂಕ : 02/02/2016**

## ಸುತ್ತೋಲೆ

**ವಿಷಯ :** 2016-17ನೇ ಸಾಲಿನ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಸಂಬಂಧ ಮಾರ್ಗಸೂಚಿ.

**************

2010-11 ರಿಂದ ಆದರ್ಶ ವಿದ್ಯಾಲಯಗಳು ಪ್ರಾರಂಭವಾಗಿದ್ದು ಪ್ರತಿ ವರ್ಷದಂತೆ 2016-17ನೇ ಸಾಲಿನ 6ನೇ ತರಗತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಆಯ್ಕೆ ಪರೀಕ್ಷೆ ನಡೆಸಬೇಕಾಗಿರುತ್ತದೆ. ಆಯ್ಕೆ ಪರೀಕ್ಷೆ ನಡೆಸಲು ಜಿಲ್ಲಾ ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು(ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಅಗತ್ಯ ಕ್ರಮ ವಹಿಸಬೇಕಾಗುತ್ತದೆ. ಎಲ್ಲಾ ಹಂತದ ಅಧಿಕಾರಿಗಳು ಹಿಂದಿನ ಸಾಲುಗಳಲ್ಲಿ ಪರೀಕ್ಷೆ ನಡೆಸಿದಂತೆ ಈ ಬಾರಿಯು ನಡೆಸಬೇಕಾಗಿದ್ದು ಈ ಸಂಬಂಧ ಮಾರ್ಗಸೂಚಿಯನ್ನು ನೀಡಿದೆ.

1. **ಪರೀಕ್ಷಾ ಪೂರ್ವ ಚಟುವಟಿಕೆಗಳು :** ಆದರ್ಶ ವಿದ್ಯಾಲಯಗಳ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದ್ದು, ಮೇ 2016ಕ್ಕೆ ಪೂರ್ಣಗೊಂಡು ಇಲಾಖೆಗೆ ಹಸ್ತಾಂತರ ಆಗುವಂತೆ ಮತ್ತು ಈ ಹೊಸ ಶಾಲಾ ಕಟ್ಟಡದಲ್ಲಿ ತರಗತಿಗಳು ಪ್ರಾರಂಭವಾಗುವ ರೀತಿಯಲ್ಲಿ ಉಪನಿರ್ದೇಶಕರು, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಡಿವೈಪಿಸಿ ಗಳು ಕ್ರಮ ವಹಿಸುವುದು. ಹೊಸ ಕಟ್ಟಡ ಲಭ್ಯವಾಗದ ಸಂದರ್ಭದಲ್ಲಿ 6 ರಿಂದ 10ನೇ ತರಗತಿಯವರೆಗೆ ತರಗತಿಗಳು ನಡೆಯಲು ಮತ್ತು ಇತರೆ ಕನಿಷ್ಠ ಭೌತಿಕ ಸೌಲಭ್ಯಗಳಿರುವ ಶಾಲೆಯನ್ನು ಆಯ್ಕೆ ಮಾಡಿಕೊಳ್ಳುವುದು ಹಾಗೂ ಈ ಬಗ್ಗೆ ಪರೀಕ್ಷೆಗೆ ಅರ್ಜಿ ಕರೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ 2016-17ನೇ ಸಲಿನಲ್ಲಿ ಶಾಲೆ ನಡೆಯುವ ಸ್ಥಳದ ಬಗ್ಗೆ ಮಾಹಿತಿ ನೀಡುವುದು.

**(ಕ್ರಮ: ಸಂಬಂಧಿಸಿದ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಡಿವೈಪಿಸಿ)**

2. **ಉಪನಿರ್ದೇಶಕರು (ಆಡಳಿತ) ಕೈಗೊಳ್ಳಬೇಕಾದ ಕ್ರಮಗಳು:**

- ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ನಡೆಸಿ 2016-17ನೇ ಸಾಲಿನ ಆಯ್ಕೆ ಪರೀಕ್ಷೆ ನಡೆಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸುವುದು.
- ಪರೀಕ್ಷಾ ಕೇಂದ್ರವನ್ನು ಗುರುತಿಸುವುದು, ಎಸ್.ಎಸ್.ಎಲ್.ಸಿ, ಪಿ.ಯು.ಸಿ ಮತ್ತು ಮುರಾರ್ಜಿ ದೇಸಾಯಿ ಪರೀಕ್ಷೆಗಳು ಈ ಅವಧಿಯಲ್ಲಿ ನಡೆಯುತ್ತಿದ್ದಲ್ಲಿ ಸೂಕ್ತ ಶಾಲೆಯನ್ನು ಪರೀಕ್ಷಾ ಕೇಂದ್ರವನ್ನಾಗಿ ಗುರುತಿಸುವುದು ಹಾಗೂ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರನ್ನು ನೇಮಿಸುವ ಬಗ್ಗೆ ಅಗತ್ಯ ಸೂಚನೆಗಳನ್ನು ನೀಡುವುದು.
- ಅರ್ಜಿ ನಮೂನೆಗಳು ಬಿ.ಇ.ಓ. ಕಛೇರಿ ಮತ್ತು ಆದರ್ಶ ವಿದ್ಯಾಲಯಗಳಲ್ಲಿ ಉಚಿತವಾಗಿ ದೊರೆಯುವಂತೆ ಕ್ರಮ ವಹಿಸುವುದು (ಪ್ರತಿ ಲಗತ್ತಿಸಿದೆ).

- ಪರೀಕ್ಷೆ ಬಗ್ಗೆ ಮಾಹಿತಿಯನ್ನು ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಲಭ್ಯವಾಗುವಂತೆ ಮಾಡುವುದು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸುವುದು ಮತ್ತು ವ್ಯಾಪಕ ಪ್ರಚಾರವನ್ನು ಉಚಿತವಾಗಿ ಮಾಡಲು ಕ್ರಮವಹಿಸುವುದು.
- ಉಪನಿರ್ದೇಶಕರು (ಅಭಿವೃದ್ಧಿ) ರವರು ಈ ಆಯ್ಕೆ ಪರೀಕ್ಷೆಯನ್ನು ನಡೆಸಲಿದ್ದು ಅವರಿಗೆ ಬೇಕಾಗುವ ಎಲ್ಲಾ ಆಡಳಿತಾತ್ಮಕ ಸಹಕಾರ ನೀಡುವುದು.

**3. ಉಪನಿರ್ದೇಶಕರು(ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯವರು ಕೈಗೊಳ್ಳಬೇಕಾದ ಕ್ರಮಗಳು:**

- ಜಿಲ್ಲೆಯಲ್ಲಿ ನಡೆಯುವ ಆದರ್ಶ ವಿದ್ಯಾಲಯಗಳ ಆಯ್ಕೆ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಯಶಸ್ವಿಯಾಗಿ ನಿರ್ವಹಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.
- ಈ ಪರೀಕ್ಷಾ ಕಾರ್ಯಕ್ಕಾಗಿ ಒಬ್ಬ ಹಿರಿಯ ಉಪನ್ಯಾಸಕರನ್ನು ಜಿಲ್ಲಾ ನೋಡೆಲ್ ಅಧಿಕಾರಿಯಾಗಿ ನೇಮಿಸಿ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನದ ಜವಾಬ್ದಾರಿಯನ್ನು ನೀಡುವುದು.
- ಜಿಲ್ಲಾ ನೋಡೆಲ್ ಅಧಿಕಾರಿಗಳು ರಾಜ್ಯ ಕಛೇರಿ ಮತ್ತು ಸಿ.ಎ.ಸಿ. ಯಿಂದ ಬರುವ ಮಾರ್ಗಸೂಚಿ ಹಾಗೂ ಸುತ್ತೋಲೆಗಳ ಪ್ರಕಾರ ಕಾರ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳುವುದು.
- ಪರೀಕ್ಷೆ ಮತ್ತು ಮೌಲ್ಯಮಾಪನ ಪರಿಣಾಮಕಾರಿಯಾಗಿ ನಡೆಯಲು ಅವಶ್ಯ ಸಭೆ ನಡೆಸಿ ಸೂಚನೆಗಳನ್ನು ನೀಡುವುದು.
- ಪರೀಕ್ಷಾ ಗೌಪ್ಯತೆಯನ್ನು ಕಾಪಾಡುವಲ್ಲಿ ಅವಶ್ಯ ಕ್ರಮ ಕೈಗೊಳ್ಳುವುದು.

**4. ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳು:**

- RTE ನಿಯಮಗಳನ್ನು ಗಮನದಲ್ಲಿರಿಸಿಕೊಂಡು ಇಡೀ ತಾಲ್ಲೂಕನ್ನು ನೆರೆಹೊರೆ ಎಂದು ಪರಿಗಣಿಸಿ ಪರೀಕ್ಷೆ ನಡೆಸುವ ಮಾಹಿತಿಯನ್ನು ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿಯೂ ಪ್ರಕಟಿಸಲು ಕ್ರಮ ವಹಿಸುವುದು.
- ದಿನಪತ್ರಿಕೆಗಳಲ್ಲಿ ದಿನಾಂಕ 07/02/2016 ರಂದು ಪ್ರಕಟಣೆ ನೀಡುವಂತೆ ಅಗತ್ಯ ಕ್ರಮ ವಹಿಸುವುದು.
- ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಎಲ್ಲಾ ಇಲಾಖೆಯ ಕಛೇರಿಗಳ ನಾಮಫಲಕ (notice board) ಗಳಲ್ಲಿ ಪ್ರಕಟಣೆಯನ್ನು ದಿನಾಂಕ 07/02/2016 ನೀಡುವುದು.
- ಆದರ್ಶ ವಿದ್ಯಾಲಯಗಳಿಗೆ ನಡೆಯುವ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ಅರ್ಜಿಗಳು ಮತ್ತು ವೇಳಾಪಟ್ಟಿ ಇಲಾಖಾ ವೆಬ್ ಸೈಟ್ www.ssakarnataka.gov.in ನಲ್ಲಿ ಲಭ್ಯವಿರುತ್ತದೆ. ಎಂಬ ಮಾಹಿತಿಗಳು ಸಾರ್ವಜನಿಕರಿಗೆ ತಿಳಿಯುವಂತೆ ಮಾಡುವುದು ಹಾಗೂ ಅರ್ಜಿಗಳು ದಿನಾಂಕ 09-02-2016 ರಿಂದ 18-02-2016ರ ಮಧ್ಯಾಹ್ನ 3.00 ಗಂಟೆಯವರೆಗೆ ಶಾಲೆ ಮತ್ತು ಬಿ.ಇ.ಓ. ಕಛೇರಿಯಲ್ಲಿ ಉಚಿತವಾಗಿ ಲಭ್ಯವಾಗುವಂತೆ ಕ್ರಮ ವಹಿಸುವುದು ಅರ್ಜಿ ಪ್ರತಿ ಲಗತ್ತಿಸಿದೆ. ಅರ್ಜಿಗಳನ್ನು ಸಲ್ಲಿಸುವಾಗ ಮೀಸಲಾತಿ ಪಡೆಯಲು ಇಚ್ಛಿಸುವವರು ಜಾತಿ ದೃಢೀಕರಣ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂಬ ಅಂಶವನ್ನು ಮನವರಿಕೆ ಮಾಡಿಕೊಡುವುದು. ಕಛೇರಿಯ ನಾಮಫಲಕದಲ್ಲಿ ಇದರ ಬಗ್ಗೆ ವಿವರಗಳನ್ನು ಪ್ರದರ್ಶಿಸುವುದು.
- ತಾಲ್ಲೂಕು ಹಂತದಲ್ಲಿ ಗಣಕಯಂತ್ರ ಬಳಸುವ ಪರಿಣತಿಯನ್ನು ಹೊಂದಿರುವ ಒಬ್ಬ ಜವಾಬ್ದಾರಿಯುತ ಅಧಿಕಾರಿ/ಸಿಬ್ಬಂದಿಯನ್ನು ಅರ್ಜಿ ವಿತರಿಸಲು ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು ಪಡೆಯಲು, ಗಣಕೀಕರಣ, ಪರೀಕ್ಷಾ ಕಾರ್ಯ, ಸಿದ್ಧತೆ, ಮುಂತಾದ ಕಾರ್ಯಗಳನ್ನು ನಿರ್ವಹಿಸಲು ಗುರುತಿಸಿ ನೇಮಿಸುವುದು. ಈ ಅಧಿಕಾರಿಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳ ವಿವರವನ್ನು ದಿನಾಂಕ

: 09-02-2016 ರೊಳಗೆ ರಾಜ್ಯ ಕಛೇರಿಗೆ ನೀಡುವುದು. ಹಿಂದಿನ ಸಾಲುಗಳಲ್ಲಿ ಈ ಕಾರ್ಯನಿರ್ವಹಿಸಿರುವ ಅನುಭವ ಇರುವವರಿಗೆ ಈ ಜವಾಬ್ದಾರಿ ನೀಡಬಹುದು ಹಾಗು ಆದರ್ಶ ವಿದ್ಯಾಲಯದ ಒಬ್ಬ ಶಿಕ್ಷಕರನ್ನು ಮುಖ್ಯಶಿಕ್ಷಕರು ಈ ಕಾರ್ಯಕ್ಕೆ ಬಳಸಿಕೊಳ್ಳಬಹುದು.

- ಆದರ್ಶ ವಿದ್ಯಾಲಯ ಮತ್ತು ಬಿ.ಇ.ಓ. ಕಛೇರಿಯಲ್ಲಿ ಬೇಡಿಕೆಗೆ ತಕ್ಕಂತೆ ಅರ್ಜಿಗಳನ್ನು ಝೆರಾಕ್ಸ್ ಮಾಡಿಸಿ ಅರ್ಜಿಗಳು ಲಭ್ಯವಿರುವಂತೆ ಕ್ರಮ ವಹಿಸುವುದು ಹಾಗೂ ಉಚಿತವಾಗಿ ವಿತರಿಸಲು ಕ್ರಮ ಕೈಗೊಳ್ಳುವುದು. ಅರ್ಜಿಗಳನ್ನು ಉಚಿತವಾಗಿ ವಿತರಿಸಿದ ಬಗ್ಗೆ ಶಾಲಾ ಹಂತದಲ್ಲಿ ಹಾಗೂ ಬ್ಲಾಕ್ ಹಂತದಲ್ಲಿ ವಹಿಯನ್ನು ನಿರ್ವಹಿಸುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು ಎಲ್ಲಾ ಶಾಲೆಗಳಲ್ಲಿ 2015-16ನೇ ಸಾಲಿನಲ್ಲಿ 5ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಆಯ್ಕೆ ಪರೀಕ್ಷೆ ಬಗ್ಗೆ ಮಾಹಿತಿ ನೀಡಿ ಪರೀಕ್ಷೆ ತೆಗೆದುಕೊಳ್ಳಲು ಪ್ರೇರೇಪಿಸುವುದು. ಈ ಕಾರ್ಯವನ್ನು ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ವ್ಯಾಪಕವಾಗಿ ಪ್ರಚಾರ ನೀಡುವುದರ ಮೂಲಕ ಮಾಡುವುದು. ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಈ ಪರೀಕ್ಷೆಯ ಅರ್ಜಿ ಲಭ್ಯವಾಗುವಂತೆ ಕ್ರಮ ವಹಿಸುವುದು.
- ಪರೀಕ್ಷಾ ಕೇಂದ್ರವನ್ನು ಗುರುತಿಸುವುದು. ಡಯಟ್ ನಿಂದ ನೇಮಕಗೊಂಡಿರುವ ನೋಡೆಲ್ ಅಧಿಕಾರಿಗಳಿಗೆ ಎಲ್ಲಾ ಸಹಕಾರ ನೀಡುವುದು.
- ಶಾಂತಿಯುತವಾಗಿ ಪರೀಕ್ಷೆ ನಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.
- ಜಿಲ್ಲಾ ಕೇಂದ್ರದಿಂದ ಪ್ರಶ್ನೆ ಪತ್ರಿಕೆಗಳನ್ನು ಪಡೆದು ತಾಲ್ಲೂಕು ಖಜಾನೆಯಲ್ಲಿ ಸುರಕ್ಷಿತವಾಗಿಡಲು ಕ್ರಮವಹಿಸುವುದು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ನಿಗಧಿತ ಸಮಯದಲ್ಲಿ ವಿತರಿಸುವುದು.
- ಪ್ರಶ್ನೆ ಪತ್ರಿಕೆಗಳನ್ನು ಜಿಲ್ಲಾ ಕೇಂದ್ರದಿಂದ ಖಜಾನೆಗೆ ಹಾಗೂ ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಧಿಕೃತ ವಾಹನಗಳಲ್ಲಿಯೇ ರವಾನಿಸುವುದು. ಇದೇ ರೀತಿ ಉತ್ತರ ಪತ್ರಿಕೆಗಳನ್ನು ಸಹ ಜಿಲ್ಲಾ ಹಂತಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಧಿಕೃತ ವಾಹನಗಳಲ್ಲಿಯೇ ರವಾನಿಸುವುದು.
- ಪರೀಕ್ಷಾ ಗೌಪ್ಯತೆಯನ್ನು ಕಾಪಾಡುವಲ್ಲಿ ಅವಶ್ಯ ಕ್ರಮ ಕೈಗೊಳ್ಳುವುದು.

5. **ತಾಲ್ಲೂಕು ಹಂತದಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಹಾಗೂ ಗಣಕೀಕರಿಸಲು ಬಿ.ಇ.ಓ. ರವರು ಅನುಸರಿಸಬೇಕಾದ ಕ್ರಮಗಳು:**

- ಅರ್ಜಿ ವಿತರಣೆ ಪ್ರಾರಂಭಿಸಿದ ದಿನದಿಂದ ಕೊನೆಯ ದಿನದವರೆಗೆ ಆಯಾ ದಿನದಂದು ಸ್ವೀಕರಿಸಲಾದ ಭರ್ತಿ ಮಾಡಿದ ಅರ್ಜಿಗಳನ್ನು ಅದೇ ದಿನದಂದು ರಾಜ್ಯ ಕಛೇರಿಯಿಂದ ನೀಡಲಾದ ತಂತ್ರಾಂಶವನ್ನು (software) ಬಳಸಿ ಗಣಕೀಕರಿಸುವುದು. ಈ ಕಾರ್ಯವನ್ನು ಡಾಟಾ ಎಂಟ್ರಿ ಆಪರೇಟರ್‌ಗಳ ಸಹಕಾರದಿಂದ ಮಾಡಿಸುವುದು. ಈ ಕಾರ್ಯಕ್ಕೆ ಕೆಳಗಿನ ಕ್ರಮವನ್ನು ಅನುಸರಿಸುವುದು.
- ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಸಮಯದಲ್ಲಿ ಅರ್ಜಿಯ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿರುವ ಬಗ್ಗೆ ಪರಿಶೀಲಿಸಬೇಕು. ಅರ್ಜಿ ಮತ್ತು ಪ್ರವೇಶ ಪತ್ರಗಳಲ್ಲಿ ಒಂದೇ ತರಹದ ಫೋಟೋ ಅಂಟಿಸಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. **ಮೀಸಲಾತಿ** ಸಂಬಂಧ ಅರ್ಜಿದಾರರು ಬರೆದಿರುವ ಜಾತಿ ಬಗ್ಗೆ ಪ್ರಮಾಣಪತ್ರದ ಪ್ರತಿ ಪಡೆದುಕೊಂಡು ಖಾತ್ರಿಪಡಿಸಿಕೊಳ್ಳುವುದು. **(ಒಮ್ಮೆ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಮೀಸಲಾತಿ ಸಂಬಂದ ಬದಲಾವಣೆಗೆ ಅವಕಾಶ ಇರುವುದಿಲ್ಲವೆಂಬ ಅಂಶವನ್ನು ಅರ್ಜಿದಾರರಿಗೆ ತಿಳಿಸುವುದು)**

- ಜಿಲ್ಲಾ ಕೋಡ್ ಮತ್ತು ಬ್ಲಾಕ್ ಕೋಡ್‌ಗಳನ್ನು ರಾಜ್ಯ ಕಛೇರಿಯಿಂದಲೇ ನೀಡಲಾಗಿದೆ. ಅರ್ಜಿ ಸ್ವೀಕರಿಸುವವರು ಅರ್ಜಿ ಮತ್ತು ಪ್ರವೇಶ ಪತ್ರಗಳಲ್ಲಿ ಸದರಿ ಕೋಡ್‌ಗಳನ್ನು ನಮೂದಿಸಬೇಕು.
- ಅಭ್ಯರ್ಥಿ ನೋಂದಣಿ ಸಂಖ್ಯೆಯು ಈ ಕೆಳಗಿನಂತೆ 10 ಅಂಕಿಗಳನ್ನು ಹೊಂದಿರುತ್ತದೆ. ನೋಂದಣಿ ಸಂಖ್ಯೆಯನ್ನು ಬ್ಲಾಕ್ ನೋಡಲ್ ಅಧಿಕಾರಿಗಳು ಅರ್ಜಿ ಪಡೆದ ತಕ್ಷಣವೇ ಅಭ್ಯರ್ಥಿಗಳಿಗೆ ನೀಡಬೇಕು.
- ಅಭ್ಯರ್ಥಿಗೆ 10 ಅಂಕಿಯ ನೋಂದಣಿ ಸಂಖ್ಯೆಯನ್ನು ಈ ಕೆಳಗಿನಂತೆ ನೀಡುವುದು.

  ವರ್ಷ –16 ಎರಡು ಅಂಕಿಗಳು (ಇದನ್ನು ಅರ್ಜಿಯಲ್ಲಿ ಮೊದಲೇ ಮುದ್ರಿಸಲಾಗಿರುತ್ತದೆ)

  ಜಿಲ್ಲಾ ಕೋಡ್–02 ಅಂಕಿಗಳು

  ಬ್ಲಾಕ್ ಕೋಡ್– 02 ಅಂಕಿಗಳು

  ಅರ್ಜಿಯ ಅನುಕ್ರಮಣಿಕೆ ಸಂಖ್ಯೆ–3 ಅಂಕಿಗಳು

  ಉದಾಹರಣೆ: ಒಂಭತ್ತು ಅಂಕಿಗಳ ಮಾದರಿ ಈ ಮುಂದಿನಂತೆ

| ವರ್ಷ | | ಜಿಲ್ಲೆ | | ತಾಲ್ಲೂಕು | | ಅರ್ಜಿ ಅನುಕ್ರಮಣಿಕೆ ಸಂಖ್ಯೆ | | | |
|---|---|---|---|---|---|---|---|---|---|
| 1 | 6 | 0 | 1 | 0 | 1 | 0 | 0 | 0 | 1 |

  ಈ ಉದಾಹರಣೆಯಲ್ಲಿ ನೋಂದಣಿ ಸಂಖ್ಯೆ 160101001 ಆಗಿರುತ್ತದೆ.

- ಅರ್ಜಿಯ ಕ್ರಮಸಂಖ್ಯೆಯನ್ನು 0001 ರಿಂದ ಪ್ರಾರಂಭಿಸಿ ಆಯಾ ದಿನದಂದೇ ಸ್ವೀಕರಿಸಿದ ಅರ್ಜಿಗಳನುಸಾರ ನೀಡುವುದು. ಕೊನೆ ದಿನಾಂಕದವರೆಗೆ ಈ ಸಂಖ್ಯೆಯನ್ನು ಮುಂದುವರೆಸುವುದು, ಕೊನೆಯ ದಿನಾಂಕದಂದು ನೀಡಲಾದ ಕ್ರಮಸಂಖ್ಯೆಯು ಆಯಾ ಬ್ಲಾಕಿನ ಒಟ್ಟು ಅರ್ಜಿಗಳ ಸಂಖ್ಯೆಯನ್ನು ಸೂಚಿಸುತ್ತದೆ.
- ಬಿ.ಇ.ಓ. ರವರು ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಕನಿಷ್ಠ 250–350 ಮಕ್ಕಳಿಗೆ ಒಂದರಂತೆ ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು.
- ಒಂದು ವೇಳೆ ಅರ್ಜಿಗಳ ಸಂಖ್ಯೆ 350 ಮೀರಿದರೆ. ಇನ್ನೊಂದು ಪರೀಕ್ಷಾ ಕೇಂದ್ರವನ್ನು ಗುರುತಿಸಿ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ನೀಡುವಾಗ ಪರೀಕ್ಷಾ ಕೇಂದ್ರದ ವಿಳಾಸವನ್ನು ನಮೂದಿಸಿ ನೀಡಬೇಕು. ಕೊನೆಯ ದಿನಾಂಕಕ್ಕೆ ಅರ್ಜಿಗಳ ಸಂಖ್ಯೆ 400 ಮೀರದಿದ್ದಲ್ಲಿ ಒಂದೇ ಕೇಂದ್ರದಲ್ಲಿ ಪರೀಕ್ಷೆ ನಡೆಸಲು ಯೋಜಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಈ ಮಾಹಿತಿ ನೀಡುವುದು.
- ಅರ್ಜಿಯನ್ನು ಸ್ವೀಕರಿಸಿದ ಕೂಡಲೇ ಪ್ರವೇಶ ಪತ್ರವನ್ನು ವಿತರಿಸುವುದು. ಅಭ್ಯರ್ಥಿಗಳು ಪರೀಕ್ಷಾ ದಿನದಂದು ಪ್ರವೇಶ ಪತ್ರ ತರಬೇಕು. ಒಂದು ವೇಳೆ ಪ್ರವೇಶ ಪತ್ರ ಕಳೆದುಕೊಂಡಿದ್ದರೆ, ಮೂಲ ಅರ್ಜಿಯನ್ನು ಆಧರಿಸಿ ಫೋಟೋ ಪರಿಶೀಲಿಸಿ ದ್ವಿತೀಯ ಪ್ರತಿ ವಿತರಿಸಬಹುದು.

6. **ಅರ್ಜಿಗಳ ಸ್ವೀಕೃತಿ ವಹಿ ನಿರ್ವಹಣೆ ಮತ್ತು ಗಣಕೀಕರಣ:** ಬ್ಲಾಕ್ ಹಂತದಲ್ಲಿ ಆಯಾ ದಿನದಂದು ಸ್ವೀಕರಿಸಲಾದ ಅರ್ಜಿಗಳನ್ನು ಈ ಕೆಳಗಿನ ವಿವರದಂತೆ ವಹಿಯಲ್ಲಿ ನಿರ್ವಹಿಸುವುದು.

ಜಿಲ್ಲೆ ಹೆಸರು :----------------- ಬ್ಲಾಕಿನ ಹೆಸರು :-----------------

ಜಿಲ್ಲಾ ಕೋಡ್ :----------------- ಬ್ಲಾಕ್ ಕೋಡ್ :-----------------

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಅರ್ಜಿ ಸ್ವೀಕರಿಸಿದ ದಿನಾಂಕ | ನೀಡಲಾದ ನೋಂದಣಿ ಸಂಖ್ಯೆ | ಸಹಿ |
|---|---|---|---|---|
| | | | | |

ಅರ್ಜಿಯಲ್ಲಿನ ವಿವರಗಳನ್ನೊಳಗೊಂಡ ಸಾಫ್ಟ್‌ವೇರ್ ಅನ್ನು ರಾಜ್ಯ ಕಛೇರಿಯಿಂದ ಸಿದ್ಧಪಡಿಸಿ ನೀಡಲಾಗುವುದು. ಸದರಿ ಸಾಫ್ಟ್‌ವೇರ್ ಬಳಸಿ ಬ್ಲಾಕ್ ಹಂತದಲ್ಲಿ ಆಯಾ ದಿನದ ಅರ್ಜಿಗಳನ್ನು ಅದೇ ದಿನದಂದು ಡಾಟಾ ಎಂಟ್ರಿ ಮಾಡಿಸುವುದು. ಸದರಿ ಕಾರ್ಯಕ್ಕೆ ಬ್ಲಾಕ್ ಹಂತದಲ್ಲಿ ಲಭ್ಯವಿರುವ ಡಾಟಾ ಎಂಟ್ರಿ ಅಪರೇಟರ್‌ಗಳ ಸಹಕಾರ ಪಡೆಯುವುದು. ಯಾವುದೇ ಅರ್ಜಿ ಅಥವಾ ಅರ್ಜಿಯಲ್ಲಿನ ಯಾವುದೇ ವಿವರ ಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸುವುದು. ಕೊನೆ ದಿನದಂದು ಗಣಕೀಕರಣಗೊಂಡ ಅರ್ಜಿಗಳ ರಿಪೋರ್ಟ್ ತೆಗೆದು ಅರ್ಜಿ ಸ್ವೀಕರಣಾ ವಹಿಯೊಂದಿಗೆ ಪರಿಶೀಲಿಸಿ ಅದರ ಸಾಫ್ಟ್ ಕಾಫಿಯನ್ನು ಜಿಲ್ಲಾ ಹಂತಕ್ಕೆ (ಡಿ.ವೈ.ಪಿ.ಗಳಿಗೆ) ನೀಡುವುದು.

ಡಿ.ವೈ.ಪಿ.ಸಿ.ಗಳು ಜಿಲ್ಲಾ ಹಂತದಲ್ಲಿ ಎಸ್.ಎಸ್.ಎ. ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸಹಕಾರದಿಂದ ಡಾಟಾ ಪರಿಶೀಲಿಸಿ ಖುದ್ದಾಗಿ ರಾಜ್ಯ ಕಛೇರಿ/ಸಿ.ಎ.ಸಿ ಗೆ ತಲುಪಿಸುವುದು. ಆರ್.ಎಂ.ಎಸ್.ಎ. ಇ–ಮೇಲ್ ಐಡಿ rmsakar@gmail.com ಮೂಲಕವೂ ಡಾಟಾವನ್ನು ಝಿಪ್ ಮಾಡಿ ಕಳುಹಿಸಬಹುದು.

ಸಾಫ್ಟ್ ವೇರ್ ಮತ್ತು ಅರ್ಜಿಗಳ ಗಣಕೀಕರಣ ಸಂಬಂಧ ಸಮಸ್ಯೆಗಳಿದ್ದಲ್ಲಿ ಮಾಹಿತಿಗಾಗಿ ಸಿಎಸಿ (CAC)ಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ : 9632029396

7. **ಅರ್ಜಿ ಸ್ವೀಕೃತಿ ಸ್ಥಳದಲ್ಲಿ ಈ ಕೆಳಗಿನ ಮಾಹಿತಿಯನ್ನು ಪ್ರಕಟಿಸುವುದು :**

- **ಆಯ್ಕೆ ಪರೀಕ್ಷೆಗೆ 3 ರಿಂದ 5ನೇ ತರಗತಿ ಪಠ್ಯ ಪುಸ್ತಕ ಆಧರಿಸಿ ಆಂಗ್ಲಭಾಷೆ (20%), ಗಣಿತ(20%) ವಿಜ್ಞಾನ(20%), ಸಮಾಜ ವಿಜ್ಞಾನ(20%) ಮತ್ತು ಸಾಮಾನ್ಯ ಜ್ಞಾನ (ಜನರಲ್ ನಾಲೇಜ್)(20%) ಇವುಗಳನ್ನು ಪರಿಗಣಿಸಲಾಗುವುದು. ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ (objective type) ಪ್ರಶ್ನೆಗಳನ್ನು ಹೊಂದಿದ್ದು, ಆಂಗ್ಲ ಮತ್ತು ಕನ್ನಡ ಮಾಧ್ಯಮಗಳಲ್ಲಿರುತ್ತವೆ. ಪರೀಕ್ಷೆಗೆ ಒಂದೇ ಪ್ರಶ್ನೆ ಪತ್ರಿಕೆ ಇದ್ದು 100 ಪ್ರಶ್ನೆಗಳಿರುತ್ತವೆ.**
- **ಪರೀಕ್ಷೆಯ ಅವಧಿ 2 ಘಂಟೆ,**
- **ಪರೀಕ್ಷಾ ದಿನಾಂಕ:20 ನೇ ಮಾರ್ಚ್ 2016, ಭಾನುವಾರ ಬೆಳಿಗ್ಗೆ 10:30 ರಿಂದ ಮಧ್ಯಾಹ್ನ 12.30 ರ ವರೆಗೆ**

8. **ಪರೀಕ್ಷಾ ಕೇಂದ್ರಗಳ ಸ್ಥಾಪನೆ:** ಆಯಾ ಬ್ಲಾಕ್‌ಗಳಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆಗನುಗುಣವಾಗಿ ಪ್ರತಿ ಕೇಂದ್ರಕ್ಕೆ ಕನಿಷ್ಠ 250 ರಿಂದ 350 ಅಭ್ಯರ್ಥಿಗಳಿಗೆ ಒಂದರಂತೆ ಗರಿಷ್ಠ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಶಾಲೆಯನ್ನು ಕೇಂದ್ರವನ್ನಾಗಿ ಆಯ್ಕೆ ಮಾಡುವುದು. ಅರ್ಜಿ ಪಡೆದು ಪ್ರವೇಶ ಪತ್ರವನ್ನು ಅಭ್ಯರ್ಥಿಗಳಿಗೆ ನೀಡುವಾಗ ಕೇಂದ್ರದ ವಿಳಾಸವನ್ನು ನಮೂದಿಸಿ ನೀಡುವುದು. ಸದರಿ ಕೇಂದ್ರಗಳು ಬ್ಲಾಕ್ ಕೇಂದ್ರಗಳಿದ್ದು, ಬಸ್ ನಿಲ್ದಾಣಕ್ಕೆ ಸಮೀಪದಲ್ಲಿರಬೇಕು. ಎಸ್.ಎಸ್.ಎಲ್.ಸಿ/ಪಿ.ಯು.ಸಿ ಪರೀಕ್ಷೆಗಳು

ನಡೆಯುತ್ತಿದ್ದಲ್ಲಿ ಆ ಪರೀಕ್ಷಾ ಕೇಂದ್ರಗಳನ್ನು ಹೊರತುಪಡಿಸಿ ಬೇರೆ ಕೇಂದ್ರವನ್ನು (ಸರ್ಕಾರಿ/ ಅನುದಾನಿತ/ ಅನುದಾನರಹಿತ ಶಾಲೆ) ಆಯ್ಕೆ ಮಾಡುವುದು.

9. **ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಮತ್ತು ಕೊಠಡಿ ಮೇಲ್ವಿಚಾರಕರ ಆಯ್ಕೆ:** ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು ಅಥವಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರನ್ನು ಮುಖ್ಯ ಅಧೀಕ್ಷಕರನ್ನಾಗಿ ನೇಮಿಸುವುದು. (ಕ್ಷೇತ್ರ ಶಿಕ್ಷಣಾಧಿಕಾರಿಗಳ ವಿವೇಚನೆಯಂತೆ). ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರನ್ನು ಕೊಠಡಿ ವೀಕ್ಷಕರನ್ನಾಗಿ ನೇಮಿಸುವುದು. ಕನಿಷ್ಠ 24 ಮಕ್ಕಳಿಗೆ ಒಂದು ಕೊಠಡಿಯಂತೆ ವೀಕ್ಷಕರ ಸಂಖ್ಯೆಯನ್ನು ನಿರ್ಧರಿಸುವುದು. ಪರೀಕ್ಷಾ ದಿನದ ಹಿಂದಿನ ದಿನದಂದು ಬಿ.ಇ.ಓ. ಮತ್ತು ಡಯಟ್‌ನ ತಾಲ್ಲೂಕು ನೋಡಲ್ ಅಧಿಕಾರಿಗಳು, ಮುಖ್ಯ ಅಧೀಕ್ಷಕರ ಮತ್ತು ಕೊಠಡಿ ವೀಕ್ಷಕರ ಸಭೆ ನಡೆಸಿ ರಾಜ್ಯ ಕಛೇರಿ/ಸಿ.ಎ.ಸಿ. ಯಿಂದ ನೀಡಲಾಗುವ ನಿರ್ದೇಶನಗಳನ್ನು ಪಾಲಿಸಲು ಸೂಚಿಸುವುದು.

10. **ಪರೀಕ್ಷಾ ಕಾರ್ಯದ ಉಸ್ತುವಾರಿ:** ಆಯಾ ಬ್ಲಾಕಿನಲ್ಲಿ ಪ್ರವೇಶ ಪರೀಕ್ಷಾ ಕಾರ್ಯದ ಉಸ್ತುವಾರಿಯನ್ನು ಆಯಾ ಬಿ.ಇ.ಓ. ಮತ್ತು ಈ ಕಾರ್ಯಕ್ಕೆ ನೇಮಕವಾದ ತಾಲ್ಲೂಕು ನೋಡಲ್ ಅಧಿಕಾರಿಗಳು ವಹಿಸಬೇಕು. ಪರೀಕ್ಷಾ ಸಮಯದಲ್ಲಿ ಯಾವುದೇ ಅವ್ಯವಹಾರ ನಡೆಯದಂತೆ ನೋಡಿಕೊಳ್ಳುವುದು ಆಯಾ ಬ್ಲಾಕ್ ಮತ್ತು ಜಿಲ್ಲಾ ಹಂತದ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಪರೀಕ್ಷಾ ದಿನದಂದು ಎಲ್ಲಾ ಹಂತದ ಇಲಾಖಾ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುವುದು.

11. **ಪ್ರಶ್ನೆ ಪತ್ರಿಕೆ ಮತ್ತು ಖಾಲಿ ಉತ್ತರ ಪತ್ರಿಕೆಗಳ ನಿರ್ವಹಣೆ:** ಪ್ರಶ್ನೆ ಪತ್ರಿಕೆ ತಯಾರಿಕೆ, ಮುದ್ರಣ, ವಿತರಣೆ, ಗೌಪ್ಯತೆ, ಕಾಪಾಡುವುದು ಮುಂತಾದ ಕಾರ್ಯಗಳನ್ನು ಬೆಂಗಳೂರಿನ ಕೇಂದ್ರೀಯ ದಾಖಲಾತಿ ಘಟಕಕ್ಕೆ (CAC) ವಹಿಸಲಾಗಿದೆ. ಈ ಕಾರ್ಯಗಳನ್ನು ನಿರ್ವಹಿಸಲು ಸಂಬಂಧಿಸಿದ ಜಿಲ್ಲೆಗಳ ಡಯಟ್ ಹಂತದಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದ್ದು, ಇವರುಗಳ ಸಭೆ ನಡೆಸಿ ಮಾರ್ಗದರ್ಶನವನ್ನು ಸಿ.ಎ.ಸಿ. (CAC) ಯಿಂದ ನೀಡಲಾಗುವುದು. ಪ್ರಶ್ನೆ ಪತ್ರಿಕೆಗಳು ಸಿ.ಎ.ಸಿ. ಯಿಂದ ಜಿಲ್ಲಾ ಹಂತಕ್ಕೆ ಬರುತ್ತವೆ. ಜಿಲ್ಲಾ ಡಯಟ್ ನೋಡಲ್ ಅಧಿಕಾರಿಗಳು ಹಾಗೂ ಪ್ರಾಂಶುಪಾಲರು ಅವುಗಳನ್ನು ಸ್ವೀಕರಿಸಿ, ಜಿಲ್ಲಾ ಖಜಾನೆಯಲ್ಲಿ ಭದ್ರಪಡಿಸಿಡುವುದು. ಪರೀಕ್ಷಾ ಹಿಂದಿನ ದಿನದಂದು ಸದರಿ ಪ್ರಶ್ನೆ ಪತ್ರಿಕೆಗಳನ್ನು ಬಿ.ಇ.ಓ. ರವರು ತಮ್ಮ ಜವಾಬ್ದಾರಿಯಲ್ಲಿ ತಮ್ಮ ವಾಹನದಲ್ಲಿ ಬ್ಲಾಕ್ ಹಂತಕ್ಕೆ ತಂದು ಬ್ಲಾಕ್ ಖಜಾನೆಯಲ್ಲಿ ಇಡುವುದು. ಪರೀಕ್ಷಾ ದಿನದಂದು ಪರೀಕ್ಷೆ ಸಮಯಕ್ಕೆ ಅರ್ಧ ಗಂಟೆ ಮುಂಚೆ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳ ಬಂಡಲ್‌ಗಳನ್ನು ತಲುಪಿಸುವುದು.

12. ಮುಖ್ಯ ಅಧಿಕ್ಷಕರು ಬಂಡಲ್ಲುಗಳನ್ನು ಬಿ.ಇ.ಓ./ನೋಡಲ್ ಅಧಿಕಾರಿಗಳ ಸಮ್ಮುಖದಲ್ಲಿ ಒಡೆದು ಸಹಿ ಪಡೆದು ಕೊಠಡಿವಾರು ವಿಂಗಡಿಸಿ, ಕೊಠಡಿ ಮೇಲ್ವಿಚಾರಕರಿಗೆ ನೀಡುವುದು, ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳ ಸಮ್ಮುಖದಲ್ಲಿ ಪಾಕೆಟ್‌ಗಳನ್ನು ಒಡೆದು ವಿತರಿಸುವುದು.

13. **ನಾಮಿನೋಲ್ ರೋಲ್ ನಿರ್ವಹಣೆ:** ಸಿ.ಎ.ಸಿ. ವತಿಯಿಂದ ನೀಡಲಾಗುವ ಅಭ್ಯರ್ಥಿಗಳ ನಾಮಿನಲ್ ರೋಲ್‌ಗಳನ್ನು ಕೊಠಡಿ ಮೇಲ್ವಿಚಾರಕರು ಅಭ್ಯರ್ಥಿಗಳ ಪರಿಶೀಲನೆಗೆ ಬಳಸುವುದು. ನಾಮಿನಲ್ ರೋಲ್‌ನ ಪ್ರತಿ ಪುಟವು 24 ವಿದ್ಯಾರ್ಥಿಗಳ ವಿವರಗಳನ್ನೊಳಗೊಂಡಿರುತ್ತದೆ. ಅದೇ ರೀತಿ ಮೌಲ್ಯಮಾಪನದ ನಂತರ ಭರ್ತಿ ಮಾಡುವ ಅಂಕಗಳ ನಮೂನೆಯಲ್ಲಿಯೂ ಸಹ 24 ವಿದ್ಯಾರ್ಥಿಗಳ ಅಂಕಗಳನ್ನು ಭರ್ತಿ

ಮಾಡುವಂತೆ ವಿನ್ಯಾಸಗೊಳಿಸಿದೆ. ಪ್ರತಿ ಅಭ್ಯರ್ಥಿಯ ಪೋಟೋ ಹಾಗೂ ಜಾತಿಯನ್ನು ಪರಿಶೀಲಿಸಿ ಸಹಿ ಪಡೆಯುವುದು. ಗೈರುಹಾಜರಾದ ಅಭ್ಯರ್ಥಿಗಳ ವಿವರವನ್ನು ನಿಗಧಿತ ನಮೂನೆಯಲ್ಲಿ ಸಿದ್ಧಪಡಿಸುವುದು. ಉತ್ತರ ಪತ್ರಿಕೆಗಳನ್ನು ಬಂಡಲ್ ಮಾಡಲು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುಸರಿಸುವ ವಿಧಾನ ಅನುಸರಿಸುವುದು. 24 ಪತ್ರಿಕೆಗಳಿಗೆ ಒಂದು ಪ್ಯಾಕೇಟ್ ಮಾಡುವುದು. ಪರೀಕ್ಷೆ ಮುಗಿದ ಮೇಲೆ ಉತ್ತರ ಪತ್ರಿಕೆಗಳ ಜೊತೆಯಲ್ಲಿ ನಾಮಿನಲ್ ರೋಲ್ ಮತ್ತು ಗೈರು ಹಾಜರಿ ತಃಖ್ತೆಗಳನ್ನು ಆಯಾ ಜಿಲ್ಲೆಯ ಡಯಟ್‌ಗೆ ತಲುಪಿಸುವುದು. ಉಪನಿರ್ದೇಶಕರು (ಅಭಿವೃದ್ಧಿ) ರವರು ಸ್ವೀಕೃತಿ ಮತ್ತು ಸುರಕ್ಷತೆಗಾಗಿ ಸೂಕ್ತ ಕ್ರಮ ವಹಿಸುವುದು.

14. **ಅನುದಾನ ಬಿಡುಗಡೆ ಮತ್ತು ಬಳಕೆ:** ಪರೀಕ್ಷಾ ಕಾರ್ಯ ಹಾಗೂ ಉಸ್ತುವಾರಿ ಕಾರ್ಯಗಳ ಸಂಬಂಧ ಪ್ರತಿ ಪರೀಕ್ಷಾ ಕೇಂದ್ರಕ್ಕೆ ತಲಾ ರೂ.10,000/- ಗಳನ್ನು ಆದರ್ಶ ಶಾಲೆಯ ಮುಖ್ಯ ಶಿಕ್ಷಕರು ಶಾಲೆಯ ಖಾತೆಯಲ್ಲಿ ಇರುವ ಅನುದಾನದಿಂದ ಮುಂಗಡವಾಗಿ ನೀಡುವುದು. (ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರೇ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಾದಲ್ಲಿ ಅವರೇ ವೆಚ್ಚಗಳನ್ನು ನಿರ್ವಹಿಸುವುದು. ಬೇರಯವರನ್ನು ಮುಖ್ಯ ಅಧೀಕ್ಷಕರನ್ನಾಗಿ ನೇಮಿಸಿದ್ದಲ್ಲಿ, ಅವರಿಗೆ ರೂ.10000/- ಮುಂಗಡ ನೀಡುವುದು) ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಅನುದಾನವನ್ನು ಖರ್ಚು ಮಾಡಿ ಪರೀಕ್ಷಾ ಕಾರ್ಯ ಮುಗಿದ 07 ದಿನದೊಳಗೆ ಲೆಕ್ಕ ಪತ್ರ ವಿವರದೊಂದಿಗೆ ಬಳಕೆ ಪ್ರಮಾಣ ಪತ್ರವನ್ನು ಶಾಲೆಯ ಮುಖ್ಯ ಶಿಕ್ಷಕರಿಗೆ ನೀಡುವುದು. ಶಾಲೆಯ ಮುಖ್ಯ ಶಿಕ್ಷಕರು ಈ ಸಂಬಂಧ ವೋಚರ್ ಗಳನ್ನು ಶಾಲೆಯಲ್ಲಿ ಕಾಯ್ದಿರಿಸಿ ಆಡಿಟ್ ಸಮಯದಲ್ಲಿ ಒದಗಿಸುವುದು.

15. **ಅನುದಾನ ಬಳಕೆಗೆ ಮಾರ್ಗಸೂಚಿ:** ಪರೀಕ್ಷಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆದರ್ಶ ವಿದ್ಯಾಲಯ ಮುಖ್ಯ ಶಿಕ್ಷಕರು ಅನುದಾನ ಬಿಡುಗಡೆ/ಬಳಕೆಗೆ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸುವುದು.

| ಕ್ರ.ಸಂ. | ವಿವರ | ಪರೀಕ್ಷಾ ಸಂಭಾವನೆ ರೂ.ಗಳಲ್ಲಿ |
|---|---|---|
| 1 | ಮುಖ್ಯ ಅಧೀಕ್ಷಕರು | 500 |
| 2 | ಜಿಲ್ಲಾ ನೋಡಲ್ ಅಧಿಕಾರಿಗಳು- ಜಿಲ್ಲೆಗೆ ಒಬ್ಬರು ಮಾತ್ರ (ಪರೀಕ್ಷೆ ಮತ್ತು ಮೌಲ್ಯಮಾಪನ ಸೇರಿ) | 500 |
| 3 | ತಾಲ್ಲೂಕು ನೋಡಲ್ ಅಧಿಕಾರಿಗಳು- ಒಂದು ತಾಲ್ಲೂಕಿಗೆ ಒಬ್ಬರು ಮಾತ್ರ (ಪರೀಕ್ಷಾ ಅರ್ಜಿ ಪಡೆಯುವುದು ಮತ್ತು ಮೌಲ್ಯಮಾಪನ ಸೇರಿ) | 500 |
| 4 | ಕ್ಷೇತ್ರ ಶಿಕ್ಷಣಾಧಿಕಾರಿಗಳು | 500 |
| 5 | ಕೊಠಡಿ ಮೇಲ್ವಿಚಾರಕರಿಗೆ | 100(24 ಅಭ್ಯರ್ಥಿಗಳಿಗೆ ಒಬ್ಬರಂತೆ) |
| 6 | ಜಿಲ್ಲಾ/ತಾಲ್ಲೂಕು ಖಜಾನಾಧಿಕಾರಿಗಳಿಗೆ | 600 |
| 7 | ಪರೀಕ್ಷಾ ಕೇಂದ್ರದ ಸಹಾಯಕರಿಗೆ | 100 (2 ದಿನಕ್ಕೆ) |
| 8 | ಪರೀಕ್ಷಾ ಕೇಂದ್ರಗಳ 'ಡಿ' ಗ್ರೂಪ್ ನೌಕರರಿಗೆ | 75 (2 ದಿನಕ್ಕೆ) |
| 9 | ವಾಟರ್ ಬಾಯ್ | 50 |
| 10 | ವಾಹನ ಚಾಲಕರಿಗೆ | 75 (2 ದಿನಕ್ಕೆ) |

| | | |
|---|---|---|
| 11 | ಸಾದಿಲ್ವಾರು (ಪರೀಕ್ಷಾ ಕಾರ್ಯಕ್ಕೆ) | 150 ಅಭ್ಯರ್ಥಿಗಳು- ರೂ. 600/-<br>250 ಅಭ್ಯರ್ಥಿಗಳು- ರೂ 700/-<br>350 ಅಭ್ಯರ್ಥಿಗಳು- ರೂ 800/-<br>351 ಅಭ್ಯರ್ಥಿಗಳಿಗಿಂತ ಹೆಚ್ಚು ಇದ್ದಲ್ಲಿ ರೂ 900/- |

**16. ದಾಖಲಾತಿ ಪ್ರಕ್ರಿಯೆ:** ಪ್ರವೇಶ ಪರೀಕ್ಷೆಯ ಫಲಿತಾಂಶ ಮತ್ತು ಅರ್ಹತೆಯಾಧಾರಿತ (ರಾಜ್ಯ ರೋಸ್ಟರ್ ಅನ್ವಯ) ಜೇಷ್ಠತಾ ಪಟ್ಟಿಗಳನ್ನು ಸಿ.ಎ.ಸಿ. ಯವರು ಆಯಾ ಬ್ಲಾಕ್‌ವಾರು ಸಿದ್ಧಪಡಿಸಿ Selection list Eligibility list ಗಳನ್ನು ಆಯಾ ಬ್ಲಾಕ್‌ಗಳಿಗೆ ನೀಡುವರು. ಇದರ ಆಧಾರದ ಮೇಲೆ ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ದಿನಾಂಕ:25-05-2016 ರಿಂದ ದಾಖಲಾತಿಗೆ ಅರ್ಹತೆ ಪಡೆದ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ 6ನೇ ತರಗತಿಗೆ ದಾಖಲು ಮಾಡಿಕೊಳ್ಳುವುದು. ಈ ಬಗ್ಗೆ ರಾಜ್ಯ ಕಛೇರಿಯಿಂದ ನೀಡಲಾಗುವ ಸೂಚನೆಗಳನ್ನು ಅನುಸರಿಸುವುದು. ಆದರ್ಶ ವಿದ್ಯಾಲಯಗಳಲ್ಲಿ ದಾಖಲಾತಿ ಪ್ರಕ್ರಿಯೆ ನಡೆಸುವುದು ಮತ್ತು ತರಗತಿಗಳನ್ನು ಪ್ರಾರಂಭಿಸುವುದು.

ಮೇಲಿನ ಮಾರ್ಗಸೂಚಿಯನ್ನು ಅನುಸರಿಸಿ ಬ್ಲಾಕ್ ಮತ್ತು ಜಿಲ್ಲಾ ಹಂತದ ಅಧಿಕಾರಿಗಳು ಪ್ರವೇಶ ಪರೀಕ್ಷೆ ಪ್ರಕ್ರಿಯೆ, ಮೌಲ್ಯಮಾಪನ ಪ್ರಕ್ರಿಯೆ ಮತ್ತು ದಾಖಲಾತಿ ಪ್ರಕ್ರಿಯೆಗಳನ್ನು ಯಾವುದೇ ಲೋಪವಿಲ್ಲದೆ ನಡೆಸುವುದು. ಯಾವುದೇ ಸಂದೇಹ, ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಕಛೇರಿಯ ಶ್ರೀ ವರದನಾಯಕ, ಸಹ ನಿರ್ದೇಶಕರು-ಮೊಬೈಲ್ ಸಂಖ್ಯೆ:9480695472, ಶ್ರೀ ಕೆ.ಹೆಚ್.ಚಂದ್ರಪ್ಪ, ಹಿರಿಯ ಕಾರ್ಯಕ್ರಮಾಧಿಕಾರಿಗಳು-ಮೊಬೈಲ್ ಸಂಖ್ಯೆ: 9480695473 ಹಾಗೂ ಶ್ರೀ ವಿ.ಆರ್.ರವಿಕುಮಾರ್, ಕಾರ್ಯಕ್ರಮಾಧಿಕಾರಿ-ಮೊಬೈಲ್ ಸಂಖ್ಯೆ:9480695467 ರವರನ್ನು ಸಂಪರ್ಕಿಸುವುದು. ಈ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ ಈ ಕೆಳಗಿನಂತಿರುತ್ತವೆ.

**ವಿಶೇಷ ಸೂಚನೆ : ದಾಖಲೆಗಳ/ಪ್ರಮಾಣಪತ್ರಗಳ ಪರಿಶೀಲನೆ, ಪ್ರವೇಶ ಪತ್ರ ಸಿದ್ಧಪಡಿಸುವ ಪ್ರಕ್ರಿಯೆ ಹಾಗೂ ಮಾಹಿತಿಯ ಗಣಕೀಕರಣದಲ್ಲಿ ತಪ್ಪುಗಳಾದಲ್ಲಿ, ಇದರಿಂದ ಫಲಿತಾಂಶದ ನಂತರ ಅನಪೇಕ್ಷಿತ ಗೊಂದಲಗಳು ಉಂಟಾದಲ್ಲಿ ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಂಬಂಧಿಸಿದ ಸಿಬ್ಬಂದಿಯನ್ನು ನೇರ ಜವಾಬ್ದಾರರಾಗುತ್ತಾರೆ. ಆದ್ದರಿಂದ ಅತ್ಯಂತ ಎಚ್ಚರಿಕೆಯಿಂದ ಈ ಕಾರ್ಯವನ್ನು ಮಾಡುವುದು.**

| ಕ್ರ. ಸಂ. | ವಿವರ | ಜವಾಬ್ದಾರಿ | 2016-17ನೇ ಸಾಲಿನ ಪರೀಕ್ಷೆಗೆ ದಿನಾಂಕ |
|---|---|---|---|
| 1 | ಪ್ರಚಾರ /ಪ್ರಕಟಣೆ | ಬಿ.ಇ.ಓ. ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು | 05-02-2016 ರಿಂದ |
| 2 | ಅರ್ಜಿ ವಿತರಣೆ | ಬಿ.ಇ.ಓ. ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು | 09-02-2016 ರಿಂದ 18-02-2016ರ ಮಧ್ಯಾಹ್ನ 3.00 ಗಂಟೆಯವರೆಗೆ |

| | | | |
|---|---|---|---|
| 3 | ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವುದು ಅರ್ಜಿಗಳ ಪರಿಶೀಲನೆ, ಪ್ರವೇಶ ಪತ್ರ ನೀಡಿಕೆ ಹಾಗೂ ಗಣಕೀಕರಣ | ಬಿ.ಇ.ಓ. ಕಛೇರಿಯಲ್ಲಿ ಗುರುತಿಸಿರುವ ಬ್ಲಾಕ್ ನೋಡಲ್ ಅಧಿಕಾರಿಗಳು | 09-02-2016 ರಿಂದ 20-02-2016ರ ಮಧ್ಯಾಹ್ನ 5.00 ಗಂಟೆಯವರೆಗೆ |
| 4 | ಸ್ವೀಕರಿಸಿದ ಅರ್ಜಿಗಳ ಗಣಕೀಕರಣ ಪೂರ್ಣಗೊಳಿಸುವುದು | ಬಿ.ಇ.ಓ. ಕಛೇರಿಯಲ್ಲಿ ಗುರುತಿಸಿರುವ ಬ್ಲಾಕ್ ನೋಡಲ್ ಅಧಿಕಾರಿಗಳು (ಡಾಟಾ ಎಂಟ್ರಿ ಅಪರೇಟರ್‌ಗಳ ಸಹಕಾರದಿಂದ) | ಆಯಾ ದಿನದಂದು ಮತ್ತು ದಿನಾಂಕ : 22-02-2016ರ ವರೆಗೆ |
| 5 | ಗಣಕೀಕರಿಸಲಾದ ಅರ್ಜಿಗಳ ವಿವರದ ಡಾಟಾವನ್ನು ಪರಿಶೀಲಿಸಿ ಜಿಲ್ಲಾ ಡಿ.ವೈ.ಪಿ.ಸಿ. ಗಳಿಗೆ ನೀಡುವುದು | ಬ್ಲಾಕ್ ನೋಡಲ್ ಅಧಿಕಾರಿಗಳು (ಡಾಟಾ ಎಂಟ್ರಿ ಅಪರೇಟರ್ ಗಳ ಸಹಕಾರದಿಂದ) | ದಿನಾಂಕ : 24-02-2015 ರಂದು |
| 6 | ಬ್ಲಾಕ್ ಹಂತದಲ್ಲಿ ಗಣಕೀಕರಿಸಲಾದ ಅರ್ಜಿಗಳ ವಿವರದ ಡಾಟವನ್ನು ಪರಿಶೀಲಿಸಿ ರಾಜ್ಯ ಹಂತಕ್ಕೆ ಖುದ್ದಾಗಿ ತಲುಪಿಸುವುದು | ಡಿ.ವೈ.ಪಿ.ಸಿ/ಎಸ್.ಎಸ್.ಎ. ಮತ್ತು ಆರ್.ಎಂ.ಎಸ್.ಎ. ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್‌ಗಳು | ದಿನಾಂಕ : 26-02-2016 ರಂದು |
| 7 | ಪ್ರವೇಶ ಪರೀಕ್ಷೆ | ಬ್ಲಾಕ್ ಹಂತದಲ್ಲಿ | ದಿನಾಂಕ:20-03-2016 ರಂದು ಬೆಳಿಗ್ಗೆ 10-30 ರಿಂದ 12-30 |
| 8 | ಉತ್ತರ ಪತ್ರಿಕೆಗಳನ್ನು ಡಯಟ್ ಹಂತಕ್ಕೆ ರವಾನಿಸುವುದು | ಬಿ.ಇ.ಓ ಮತ್ತು ಬ್ಲಾಕ್ ನೋಡಲ್ ಅಧಿಕಾರಿ | ದಿನಾಂಕ:20-03-2016 ರಂದು ಪರೀಕ್ಷೆಯ ನಂತರ |
| 9 | ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಸಿ.ಎ.ಸಿ.ಯವರು ಸೂಚಿಸಿರುವಂತೆ ಬೇರೆ ಜಿಲ್ಲೆಗಳಿಗೆ ರವಾನಿಸುವುದು | ಡಯಟ್ ಪ್ರಾಂಶುಪಾಲರ ನೇತೃತ್ವದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳು | ದಿನಾಂಕ:21-03-2016 ರಂದು ಪೂರ್ವಾಹ್ನ. |
| 10 | ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮತ್ತು ಅಂಕಪಟ್ಟಿ ಸಿದ್ಧಪಡಿಸುವುದು | ಡಯಟ್ ಪ್ರಾಂಶುಪಾಲರ ನೇತೃತ್ವದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳು | ದಿನಾಂಕ:24-03-2016 ರಿಂದ 26-03-2016 |
| 11 | ಭರ್ತಿ ಮಾಡಿದ ಅಂಕಪಟ್ಟಿಗಳನ್ನು ಪರಿಶೀಲಿಸಿ ಸಿ.ಎ.ಸಿ.ಗೆ ತಲುಪಿಸುವುದು | ಜಿಲ್ಲಾ ನೋಡಲ್ ಅಧಿಕಾರಿಗಳು-ಡಯಟ್ | ದಿನಾಂಕ : 28-03-2016 |
| 12 | ಫಲಿತಾಂಶ ಪ್ರಕಟಣೆ ಮತ್ತು ಅರ್ಹತೆಯಾಧಾರಿತ ಜೇಷ್ಠತಾ ಪಟ್ಟಿ ಪ್ರಕಟಣೆ | ಕೇಂದ್ರೀಯ ದಾಖಲಾತಿ ಘಟಕ ಬೆಂಗಳೂರು | ದಿನಾಂಕ : 07-04-2016 |
| 13 | ಶಾಲೆ ಹಾಗೂ ದಾಖಲಾತಿ | ಶಾಲಾ ಹಂತದಲ್ಲಿ | ದಿನಾಂಕ : 27-05-2016 |

| | | | |
|---|---|---|---|
| | ಪ್ರಕ್ರಿಯೆ ಪ್ರಾರಂಭ | | |
| 14 | ತರಗತಿಗಳ ಪ್ರಾರಂಭ | ಶಾಲಾ ಹಂತದಲ್ಲಿ | ದಿನಾಂಕ : 01-06-2016 ರಿಂದ |

ರಾಜ್ಯ ಯೋಜನಾ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ

ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು

1. ವಿಶೇಷಾಧಿಕಾರಿಗಳು, ಕೇಂದ್ರೀಯ ದಾಖಲಾತಿ ಘಟಕ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ
2. ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಮತ್ತು ಡಿ.ವೈ.ಪಿ.ಸಿ ಆರ್.ಎಂ.ಎಸ್.ಎ. ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ
3. ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ
4. ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರು ಆದರ್ಶ ವಿದ್ಯಾಲಯ ರವರಿಗೆ ಅಗತ್ಯ ಕ್ರಮಕ್ಕಾಗಿ

**ಗೌರವ ಪೂರ್ವಕವಾಗಿ ಮಾಹಿತಿಗಾಗಿ ಪ್ರತಿಯನ್ನು**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ ರವರಿಗೆ
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಆರ್.ಎಂ.ಎಸ್.ಎ. ಬೆಂಗಳೂರು
4. ಅಪರ ಆಯುಕ್ತರು, ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯ

**ಪ್ರತಿಯನ್ನು**

1. ನಿರ್ದೇಶಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಇವರಿಗೆ ಮಾಹಿತಿಗಾಗಿ
2. ನಿರ್ದೇಶಕರುಗಳು, ಎಲ್ಲಾ ಅಪರ ಆಯುಕ್ತರ ಕಛೇರಿಗಳು, ಮಾಹಿತಿಗಾಗಿ
3. ಜಂಟಿ ನಿರ್ದೇಶಕರುಗಳು, ಎಲ್ಲಾ ಅಪರ ಆಯುಕ್ತರ ಕಛೇರಿಗಳು
4. ಮುಖ್ಯಲೆಕ್ಕಾಧಿಕಾರಿಗಳು, ಆರ್.ಎಂ.ಎಸ್.ಎ. ರವರಿಗೆ ಮಾಹಿತಿಗಾಗಿ
5. ಕಛೇರಿ ಪ್ರತಿ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು 560001.

**2016-17ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಅರ್ಜಿ**

ಅ) ಇಲ್ಲಿ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ ಮೊಹರು ಸಹಿತ ದೃಢೀಕರಿಸಿ ದಿನಾಂಕ ನಮೂದಿಸಿ

ಆ)ಜಿಲ್ಲೆಯ ಹೆಸರು                ಇ) ತಾಲ್ಲೂಕಿನ ಹೆಸರು

| ಕಛೇರಿಯ ಉಪಯೋಗಕ್ಕೆ ಮಾತ್ರ | | | | | | | | | |
|---|---|---|---|---|---|---|---|---|---|
| ವರ್ಷ | | | ಜಿಲ್ಲಾ ಕೋಡ್ | | ತಾಲ್ಲೂಕು ಕೋಡ್ | | ಕ್ರಮ ಸಂಖ್ಯೆ | | |

| ವಿದ್ಯಾರ್ಥಿಗಳು/ಪೋಷಕರು ಭರ್ತಿ ಮಾಡತಕ್ಕದ್ದು | | | | | | | | | | |
|---|---|---|---|---|---|---|---|---|---|---|
| 1 | ವಿದ್ಯಾರ್ಥಿಯ ಹೆಸರು (ಪೂರ್ಣಾಕ್ಷರಗಳಲ್ಲಿ) : | | | | | | | | | |
| 2 | ಲಿಂಗ | ಗಂಡು | ಹೆಣ್ಣು | | | | | | | |
| 3 | ವಾಸ ಸ್ಥಳ | ಗ್ರಾಮೀಣ | ನಗರ | | | | | | | |
| 4 | ವಿಕಲ ಚೇತನರೇ | ಹೌದು | ಇಲ್ಲ | | | | | | | |
| 5 | ವಿದ್ಯಾರ್ಥಿ/ವಿದ್ಯಾರ್ಥಿನಿಯ ಜನ್ಮ ದಿನಾಂಕ | ದಿ | ದಿ | ತಿ | ತಿ | ವ | ವ | ವ | ವ | ಜಾತಿ ಮತ್ತು ಆದಾಯ ಪ್ರಮಾಣಪತ್ರ ಲಗತ್ತಿಸಿದೆಯೇ |
| 6 | ವಿದ್ಯಾರ್ಥಿಯ ಜಾತಿ/ ಸಾಮಾಜಿಕ ವರ್ಗ (ಮೀಸಲಾತಿ ಪಡೆಯುತ್ತಿದ್ದಲ್ಲಿ ಸರಯಾದ ಮಾಹಿತಿ ನೀಡುವುದು) | ಎಸ್.ಸಿ | ಎಸ್.ಟಿ | ಪ್ರ-1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | |
| 7 | ತಾಯಿಯ ಹೆಸರು | | | | | | | | | |
| 8 | ತಂದೆಯ ಹೆಸರು | | | | | | | | | |
| 9 | ಪೂರ್ಣ ವಿಳಾಸ | | | | | | | | | |
| | ಅಂಚೆ | | | | | | | | | |
| | ತಾಲ್ಲೂಕು | | | | | | | | | |
| | ಜಿಲ್ಲೆ | | | | | | | | | |
| | ದೂರವಾಣಿ/ಮೊಬೈಲ್ ಸಂಖ್ಯೆ | | | | | | | | | |
| 10 | ವಿದ್ಯಾರ್ಥಿ 5ನೇ ತರಗತಿ ಓದುತ್ತಿರುವ ಶಾಲೆಯ ಹೆಸರು ಮತ್ತು ವಿಳಾಸ | | | | | | | | | |

ಮೇಲ್ಕಂಡ ಎಲ್ಲಾ ಮಾಹಿತಿಗಳು ನಮಗೆ ತಿಳಿದಿರುವ ಮಟ್ಟಗೆ ಸರಿಯಾಗಿವೆ ಎಂದು ಈ ಮೂಲಕ ದೃಢೀಕರಿಸಿದೆ.

ವಿದ್ಯಾರ್ಥಿಯ ಸಹಿ        ಮುಖ್ಯ ಶಿಕ್ಷಕರ ಸಹಿ ಮತ್ತು ಮೊಹರು        ತಂದೆ /ತಾಯಿ/ಪೋಷಕರ ಸಹಿ

ಇಲ್ಲಿ ಕತ್ತರಿಸಿ

---

ಪ್ರವೇಶ ಪತ್ರ

ಅ) ಇಲ್ಲಿ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ ಮೊಹರು ಸಹಿತ ದೃಢೀಕರಿಸಿ ದಿನಾಂಕ ನಮೂದಿಸಿ

____________ಎಂಬ ವಿದ್ಯಾರ್ಥಿ/ವಿದ್ಯಾಥಿನಿಯ ದಿನಾಂಕ ____________ರಂದು ನಡೆಯಲಿರುವ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗಿದೆ.

ಜಾತಿ/ಸಾಮಾಜಿಕ ವರ್ಗ : ____________

ನೋಂದಣಿ ಸಂಖ್ಯೆ

| | | | | | | | | | |
|---|---|---|---|---|---|---|---|---|---|
| | | | | | | | | | |

ಪರೀಕ್ಷಾ ಸಮಯ        ಬೆಳಿಗ್ಗೆ 10.30 ರಿಂದ 12.30 ರವರೆಗೆ

ಪರೀಕ್ಷಾ ಕೇಂದ್ರದ ಹೆಸರು

ವಿದ್ಯಾರ್ಥಿಯ ಸಹಿ        ಕೊಠಡಿ ಮೇಲ್ವಿಚಾರಕರ ಸಹಿ        ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿ ಮೊಹರಿನೊಂದಿಗೆ

| ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ ಆದರ್ಶ ವಿದ್ಯಾಲಯಗಳ ಪಟ್ಟಿ | | | | | | | | |
|---|---|---|---|---|---|---|---|---|
| ಕ್ರ.ಸಂ | ಜಿಲ್ಲೆ | ಕ್ರ.ಸಂ | [illegible] ವಿದ್ಯಾಲಯ ಮಂಜೂರಾಗಿರು | | | | | |
| 1 | 2 | 3 | 4 | 5 | 6 | 7 | 8 | 9 |
| 1 | ಬಾಗಲಕೋಟೆ | 1 | ಬಾಗಲಕೋಟೆ | | | | | |
| | | 2 | ಬಾದಾಮಿ | | | | | |
| | | 3 | ಬೀಳಗಿ | | | | | |
| | | 4 | ಹುನಗುಂದ | | | | | |
| | | 5 | ಜಮಖಂಡಿ | | | | | |
| | | 6 | ಮುದ್ಹೋಳ | | | | | |
| 2 | ಬೆಳಗಾಂ | 7 | ರಾಮದುರ್ಗ | | | | | |
| | | 8 | ಸವದತ್ತಿ | | | | | |
| 3 | ಬಳ್ಳಾರಿ | 9 | ಬಳ್ಳಾರಿ | | | | | |
| | | 10 | [illegible] ಹಳಿ | | | | | |
| | | 11 | ಹೊಸಪೇಟೆ | | | | | |
| | | 12 | ಸಿರುಗುಪ್ಪ | | | | | |
| | | 13 | ಸಂಡೂರು | | | | | |
| | | 14 | ಕೂಡ್ಲಿಗಿ | | | | | |
| 4 | ಬೀದರ | 15 | ಔರಾದ್ | | | | | |
| | | 16 | ಬಸವಕಲ್ಯಾಣ | | | | | |
| | | 17 | ಹುಮನಾಬಾದ್ | | | | | |
| | | 18 | ಬೀದರ್ | | | | | |
| 5 | ಬಿಜಾಪುರ | 19 | ಬಸವನ ಬಾಗೇವಾಡಿ | | | | | |
| | | 20 | ಬಿಜಾಪುರ(ಗ್ರಾಮೀಣ) | | | | | |
| | | 21 | ಮುದ್ದೇಬಿಹಾಳ | | | | | |
| | | 22 | ಇಂಡಿ | | | | | |
| | | 23 | ಸಿಂಧಗಿ | | | | | |
| 6 | ಚಿಕ್ಕಬಳ್ಳಾಪುರ | 24 | ಬಾಗೇಪಲ್ಲಿ | | | | | |
| | | 25 | ಗುಡಿಬಂಡೆ | | | | | |
| | | 26 | ಗೌರಿಬಿದನೂರು | | | | | |
| | | 27 | ಚಿಂತಾಮಣಿ | | | | | |
| 7 | ಚಿಕ್ಕೋಡಿ | 28 | ಗೋಕಾಕ್ | | | | | |
| | | 29 | ರಾಯಬಾಗ್ | | | | | |
| 8 | ಚಿತ್ರದುರ್ಗ | 30 | ಚಳ್ಳಕೆರೆ | | | | | |
| | | 31 | ಮೊಳಕಾಲ್ಮೂರು | | | | | |
| 9 | ದಾವಣಗೆರೆ | 32 | ಹರಪನಹಳ್ಳಿ | | | | | |
| 10 | ಧಾರವಾಡ | 33 | ಧಾರವಾಡ | | | | | |
| | | 34 | ಕಲಘಟಗಿ | | | | | |
| 11 | ಗದಗ | 35 | ರೋಣ | | | | | |
| | | 36 | ಮುಂಡರಗಿ | | | | | |

| ಕ್ರ.ಸಂ | ಜಿಲ್ಲೆ | ಕ್ರ.ಸಂ | [illegible] ವಿದ್ಯಾಲಯ ಮಂಜೂರಾಗಿರು | | | | | |
|---|---|---|---|---|---|---|---|---|
| 12 | ಗುಲ್ಬರ್ಗಾ | 37 | ಅಫಜಲಪುರ | | | | | |
| | | 38 | ಆಳಂದ | | | | | |
| | | 39 | ಚಿಂಚೋಳ್ಳಿ | | | | | |
| | | 40 | ಚಿತ್ತಾಪುರ | | | | | |
| | | 41 | ಗುಲ್ಬರ್ಗಾ | | | | | |
| | | 42 | ಜೇವರ್ಗಿ | | | | | |
| | | 43 | ಸೇಡಂ | | | | | |
| 13 | ಹಾಸನ | 44 | ಹೊಳೆನರಸೀಪುರ | | | | | |
| 14 | ಕೋಲಾರ | 45 | ಬಂಗಾರಪೇಟೆ | | | | | |
| | | 46 | ಮುಳಬಾಗಿಲು | | | | | |
| | | 47 | ಶ್ರೀನಿವಾಸಪುರ | | | | | |
| 15 | ಕೊಪ್ಪಳ | 48 | ಕೊಪ್ಪಳ | | | | | |
| | | 49 | ಗಂಗಾವತಿ | | | | | |
| | | 50 | ಕುಷ್ಟಗಿ | | | | | |
| | | 51 | ಯಲಬುರ್ಗ | | | | | |
| 16 | ಮಧುಗಿರಿ | 52 | ಪಾವಗಡ | | | | | |
| 17 | ಮೈಸೂರು | 53 | ಕೆ.ಆರ್.ನಗರ | | | | | |
| | | 54 | ಹುಣಸೂರು | | | | | |
| | | 55 | ಮೈಸೂರು | | | | | |
| | | 56 | ಟಿ.ನರಸೀಪುರ | | | | | |
| | | 57 | ನಂಜನಗೂಡು | | | | | |
| | | 58 | ಹೆಚ್.ಡಿ.ಕೋಟೆ | | | | | |
| 18 | ರಾಯಚೂರು | 59 | ಲಿಂಗಸಗೂರು | | | | | |
| | | 60 | ಮಾನ್ವಿ | | | | | |
| | | 61 | ಸಿಂಧನೂರು | | | | | |
| | | 62 | ರಾಯಚೂರು | | | | | |
| | | 63 | [illegible] (ಅರಕೇರಾ) | | | | | |
| 19 | ರಾಮನಗರ | 64 | ಕನಕಪುರ | | | | | |
| | | 65 | ಚನ್ನಪಟ್ಟಣ | | | | | |
| 20 | ಯಾದಗಿರಿ | 66 | ಶಹಾಪುರ | | | | | |
| | | 67 | ಯಾದಗಿರಿ | | | | | |
| | | 68 | ಸುರಪುರ | | | | | |
| 21 | ಮಂಡ್ಯ | 69 | ಮಳ್ಳವಳ್ಳಿ | | | | | |
| | | 70 | ಪಾಂಡವಪುರ | | | | | |
| 22 | ಚಾಮರಾಜನಗ | 71 | ಯಳಂದೂರು | | | | | |
| | | 72 | ಚಾಮರಾಜನಗರ | | | | | |
| | | 73 | ಕೊಳ್ಳೇಗಾಲ | | | | | |
| | | 74 | ಗುಂಡ್ಲುಪೇಟೆ | | | | | |
| | | | | | | | | |